ಇ) ನರ್ಸಿಂಗ್ ಟ್ಯೂಟರ್‌ಗಳನ್ನು ಪ್ರೊಫೆಸರ್ಸ್ ಹುದ್ದೆಗೆ ಭಡ್ತಿ ಕೊಟ್ಟಿಲ್ಲ. ನರ್ಸಿಂಗ್ ಟ್ಯೂಟರ್‌ಗಳನ್ನು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಿಗೆ ಸಿ ಮತ್ತು ಆರ್ ರೂಲ್ಸ್ ಪ್ರಕಾರ ಭಡ್ತಿ ಕೊಟ್ಟಿದೆ.

ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ಪ್ರೊಫೆಸರ್ ಹುದ್ದೆಗೆ ಭಡ್ತಿ ನೀಡಿಲ್ಲ. ಇನ್‌ಚಾರ್ಜ್ ಆಗಿ ನೇಮಕ ಮಾಡಿದೆ. ಬಹಳ ವರ್ಷಗಳಿಂದ ಹುದ್ದೆಗಳು ಖಾಲಿ ಇದ್ದುದರಿಂದ ಅರ್ಹರಾದ ಹಾಗೂ ಹಿರಿಯ ಆಫೀಸರ್‌ಗಳನ್ನು ಇನ್‌ಚಾರ್ಜ್ ಆಗಿ ನೇಮಿಸಲಾಗಿದೆ.

ಈ) ಇದೆ.

ಹಾಲಿ ನೇಮಕಾತಿ ನಿಯಮದ ಪ್ರಕಾರ ಉಪನ್ಯಾಸಕರ ಹುದ್ದೆಗಳಲ್ಲಿ ೩೩⅓% ಹುದ್ದೆಗಳನ್ನು ನೇರ ನೇಮಕ ಮಾಡಲು ಅವಕಾಶವಿದೆ. ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಕಾತಿ

೧೪೪೬. ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲೋಕ ಸೇವಾ ಆಯೋಗದ ಕಚೇರಿಯಲ್ಲಿರುವ ಒಂದು ಮತ್ತು ಎರಡನೇ ದರ್ಜೆ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಮೇಲ್ಕಂಡ ಉದ್ಯೋಗಗಳಲ್ಲಿರುವ ನಗರವಾಸಿಗಳು ಮತ್ತು ಗ್ರಾಮಾಂತರ ಪ್ರದೇಶದವರ ಸಂಖ್ಯೆ ಎಷ್ಟು ?

ಇ) ಗ್ರಾಮಾಂತರ ಪ್ರದೇಶದ ಜನರಿಗೆ ಆದ್ಯತೆ ಕೊಡಲಾಗಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಒಂದನೇ ದರ್ಜೆ ಅಧಿಕಾರಿಗಳು — ೮ |
ಎರಡನೇ ದರ್ಜೆ ಅಧಿಕಾರಿಗಳು — ೧೩ | ಒಟ್ಟು ೨೧

ಆ) ಎಲ್ಲರೂ ಈಗ ನಗರವಾಸಿಗಳೇ.

ಇ) ಈ ಹುದ್ದೆಗಳ ನೇರ ನೇಮಕಾತಿಗಾಗಿ ನೇಮಕಾತಿ ನಿಯಮಗಳಲ್ಲಿ ಅವಕಾಶ ಇಲ್ಲ. ಮುಖ್ಯವಾಗಿ ಸೇವಾ ಹಿರಿತನದ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಹೊಸ ನಗರದಲ್ಲಿ ಕ್ರೀಡಾಂಗಣ ನಿರ್ಮಾಣ

೧೧೫೫. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ವಾರ್ತಾ ಯುವಜನ ಸೇವಾ ಹಾಗೂ ಕ್ರೀಡಾ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸನಗರ ತಾಲ್ಲೂಕಿನ ಕ್ರೀಡಾಂಗಣ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ?

ಆ) ಕೆಲಸ ಪೂರೈಸಲು ಎಷ್ಟು ಸಮಯ ಬೇಕಾಗಬಹುದು ?

ಇ) ಪ್ರತಿ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆ ಇದೆಯೇ ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).

ಅ) ಇನ್ನೂ ಪ್ರಾರಂಭವಾಗಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸದ್ಯದಲ್ಲಿ ಇಲ್ಲ.